MOTHERHOODIVF.COM

ART ASSISTED REPRODUCTIVE TECHNOLOGY

# ಬಂಜೆತನದ ಚಿಕಿತ್ಸೆಯ ಬಗ್ಗೆ ನೀವು ತಿಳಿದುಕೊಳ್ಳಲೇಬೇಕಾದ ಎಲ್ಲಾ ಅಂಶಗಳು

ಭಾರತದಲ್ಲಿ ಶೇಕಡ 10–15 ರಷ್ಟು ವಿವಾಹಿತ ದಂಪತಿಗಳಲ್ಲಿ ಬಂಜೆತನದ ವೈದ್ಯಕೀಯ ಸ್ಥಿತಿಯು ಪ್ರಚಲಿತದಲ್ಲಿದೆ. ಈ ಸಮಸ್ಯೆಗೆ ಅನೇಕ ಕಾರಣಗಳಿದ್ದು, ಅವು ಜೀವನಶೈಲಿಯ ಆಯ್ಕೆಯಿಂದ ವಿವಿಧ ವೈದ್ಯಕೀಯ ಸ್ಥಿತಿಗಳನ್ನು ಒಳಗೊಂಡಿವೆ.

ಸಾಮಾನ್ಯ ಕಾರಣಗಳಲ್ಲಿ ಹಾರ್ಮೋನು ಅಸಮತೋಲನ, ವೀರ್ಯಾಣು ಎಣಿಕೆ ಕಡಿಮೆ ಅಥವಾ ಇಲ್ಲದೇ ಇರುವಿಕೆ, ಸ್ತ್ರೀ ಅಂಡಾಣು ಕಡಿಮೆ ಇರುವಿಕೆ, ಕಟ್ಟಿಕೊಂಡ ಫಾಲೋಪಿಯನ್ ನಾಳಗಳು, ಎಂಡೊಮೆಟ್ರಿಯೊಸಿಸ್ ಅಥವಾ ಚಾಕೊಲೇಟ್ ಸಿಸ್ಟುಗಳು ಮುಖ್ಯವಾಗಿವೆ. ಫಲವತ್ತತೆಯ ಮೇಲೆ ಪರಿಣಾಮ ಬೀರುವ ಜೀವನಶೈಲಿಗಳೆಂದರೆ ಸಾಮಾನ್ಯವಾಗಿ ಒತ್ತಡ, ಸ್ಥೂಲಕಾಯತೆ, ಅತಿಯಾದ ಮದ್ಯಪಾನ ಮತ್ತು ಧೂಮಪಾನ ಸೇವನೆ.

### ಬಂಜೆತನವನ್ನು ನಿಭಾಯಿಸುವಿಕೆ: ಜೀವನಶೈಲಿಯನ್ನು ಬದಲಾಯಿಸುವುದರಿಂದ ಸಹಾಯವಾಗಬಹುದೆ?

ಬಂಜೆತನವನ್ನು ತಡೆಗಟ್ಟುವಲ್ಲಿ ಮೊದಲ ಹೆಜ್ಜೆಯೆಂದರೆ ಆರೋಗ್ಯಪೂರ್ಣ ತೂಕವನ್ನು ನಿರ್ವಹಿಸುವುದು, ನಿಯಮಿತ ವ್ಯಾಯಾಮ, ಗರ್ಭಧರಿಸಲು ನಿಮ್ಮ ಸಾಮರ್ಥ್ಯವನ್ನು ಬೆಂಬಲಿಸುವ ಮತ್ತು ಗರ್ಭಾವಸ್ಥೆಯನ್ನು ನಿರ್ವಹಿಸಲು ಬೆಂಬಲ ನೀಡುವಂತಹ ಆಹಾರವನ್ನು ಆಯ್ಕೆ ಮಾಡಿ ಆರೋಗ್ಯಕರ ಜೀವನಶೈಲಿಯನ್ನು ಅನುಸರಿಸುವಿಕೆ. ಆಹಾರಕ್ರಮದ ಜೊತೆಗೆ, ಗರ್ಭಧರಿಸುವಿಕೆಗೆ ಸಹಾಯವಾಗುವ ಜೀವನಶೈಲಿಯ ಆಯ್ಕೆಗಳೆಂದರೆ ಮದ್ಯಪಾನವನ್ನು ಕಡಿಮೆ ಮಾಡುವುದು, ಧೂಮಪಾನವನ್ನು ನಿಲ್ಲಿಸುವುದು, ಕೆಫೀನ್ ಸೇವನೆಯನ್ನು ಕಡಿಮೆ ಮಾಡುವುದು ಮತ್ತು ಪ್ರತಿನಿತ್ಯ ಸಾಮಾನ್ಯ ವ್ಯಾಯಾಮವನ್ನು ಮಾಡುವುದು ಸೇರಿವೆ. ಜೀವನಶೈಲಿಯ ಬದಲಾವಣೆಗಳ ಹೊರತಾಗಿಯೂ ಮತ್ತು ಗರ್ಭಧರಿಸಲು ಪ್ರಯತ್ನಿಸುವುದನ್ನು ಮುಂದುವರೆಸಿಯೂ ನಿಮಗೆ ಕಳೆದ ಎರಡು–ಮೂರು ವರ್ಷಗಳಿಂದ ಯಾವುದೇ ಧನಾತ್ಮಕ ಫಲಿತಾಂಶಗಳು ಕಂಡುಬಾರದಿದ್ದರೆ, ನೀವು ಅಥವಾ ನಿಮ್ಮ ಸಂಗಾತಿಗೆ ಬಂಜೆತನದ ಹೆಚ್ಚಿನ ಪರೀಕ್ಷೆ ಮತ್ತು ಚಿಕಿತ್ಸೆಯ ಅಗತ್ಯವಿರುತ್ತದೆ.

### ಬಂಜೆತನವನ್ನು ನಿಭಾಯಿಸುವಿಕೆ: ಲಭ್ಯವಿರುವ ಚಿಕಿತ್ಸೆಯ ಆಯ್ಕೆಗಳು ಯಾವುವು?

ವಯಸ್ಸು, ಬಂಜೆತನದ ಅವಧಿ, ವೈಯಕ್ತಿಕ ಆಯ್ಕೆ ಮತ್ತು ಎಲ್ಲದಕ್ಕಿಂತ ಮುಖ್ಯವಾಗಿ, ಬಂಜೆತನದ ಪ್ರಾಥಮಿಕ ಕಾರಣವನ್ನು ಆಧರಿಸಿ ಅಗತ್ಯವಿರುವ ಚಿಕಿತ್ಸೆಯನ್ನು ಆಯ್ಕೆ ಮಾಡಲಾಗುತ್ತದೆ. ವೀರ್ಯಾಣು ಸಂಖ್ಯೆಯನ್ನು ಸುಧಾರಿಸಲು ಔಷಧಿ, ವೀರ್ಯಾಣು ಅಥವಾ ಫಲವತ್ತತೆಯನ್ನು ಪುನಃಸ್ಥಾಪಿಸಲು ಶಸ್ತ್ರಚಿಕಿತ್ಸೆ ಪುರುಷರಿಗೆ ಇರುವ ಚಿಕಿತ್ಸೆಗಳಾಗಿದ್ದು, ಮಹಿಳೆಯರಿಗೆ ಅಂಡೋತ್ಪತ್ತಿ, IUI ಅಥವಾ ಶಸ್ತ್ರಚಿಕಿತ್ಸೆಯ ಮೂಲಕ ಫಲವತ್ತತೆಯನ್ನು ಪುನಃಸ್ಥಾಪನೆಯನ್ನು ಉತ್ತೇಜಿಸಲು ಔಷಧಿಗಳು ಅಗತ್ಯವಾಗಬಹುದು. ಬಂಜೆತನವನ್ನು ಸರಿಪಡಿಸಲಾಗದ ಸಂದರ್ಭಗಳಲ್ಲಿ, ದಂಪತಿಗಳಿಗೆ ನೆರವಾಗಲು ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ (ಅಸಿಸ್ಟೆಡ್ ರಿಪ್ರೊಡಕ್ಟೀವ್ ಟೆಕ್ನಾಲಜಿ–ART) ಇದ್ದೇ ಇರುತ್ತದೆ.

**ಬಂಜೆತನವನ್ನು ಸರಿಪಡಿಸಲಾಗದ ಸಂದರ್ಭಗಳಲ್ಲಿ, ದಂಪತಿಗಳಿಗೆ ನೆರವಾಗಲು ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ (ಅಸಿಸ್ಟೆಡ್ ರಿಪ್ರೊಡಕ್ಟೀವ್ ಟೆಕ್ನಾಲಜಿ–ART) ಇದೇ ಇರುತದೆ.**



### ಬಂಜೆತನಕ್ಕಾಗಿ IUI ಚಿಕಿತ್ಸೆ ಎಂದರೇನು? IVF ಚಿಕಿತ್ಸೆ ಎಂದರೇನು ಮತ್ತು ಇದು ಹೇಗೆ ವಿಭಿನ್ನವಾಗಿದೆ?

ಗಂಡು ಅಥವಾ ಹೆಣ್ಣು ದೇಹದಲ್ಲಿ ಫಲವತ್ತತೆಯ ಸಮಸ್ಯೆಯಿರುವ ಸಂದರ್ಭಗಳಲ್ಲಿ, IUI (ಇಂಟ್ರಾಯುಟೆರಿನ್ ಇನ್ಸೆಮಿನೇಶನ್) ಒಂದು ಆಯ್ಕೆಯಾಗಿದೆ. ಸಂಸ್ಕರಿಸಲಾದ ವೀರ್ಯವನ್ನು ನೇರವಾಗಿ ಗರ್ಭಕೋಶದಲ್ಲಿ ಇರಿಸಲಾಗುತ್ತದೆ ಮತ್ತು ಫಲವತ್ತತೆಗಾಗಿ ಅಂಡಾಣುಗಳು ಬಿಡುಗಡೆಯಾಗುವಂತೆ ಅಂಡೋತ್ಪತ್ತಿಯಾಗುವ ಸಂದರ್ಭದಲ್ಲಿ ಹೀಗೆ ಮಾಡಲಾಗುತ್ತದೆ, ಆದ್ದರಿಂದ ಈ ಪ್ರಕ್ರಿಯೆಯು ಫಲವತ್ತತೆಯ ಸಾಧ್ಯತೆಯನ್ನು ಹೆಚ್ಚಿಸುತ್ತದೆ. IVF ಎಂಬುದು ಪ್ರಯೋಗಾಲಯದಲ್ಲಿ ಫಲವತ್ತತೆ ಸಂಭವಿಸುವ ಪ್ರಕ್ರಿಯೆಯಾಗಿದ್ದು, ಇನ್ನೂ ಫಲಿತವಾಗಾದ ಅಂಡಾಣುವನ್ನು ವೀರ್ಯಗಳೊಂದಿಗೆ ಸಂಸ್ಕರಿಸಲಾಗುತ್ತದೆ, ನಂತರ ಈ ಭ್ರೂಣವನ್ನು ಗರ್ಭಾಶಯದ ಒಳಸೇರಿಸಲು ವರ್ಗಾಯಿಸಲಾಗುತ್ತದೆ. IVF ಯಶಸ್ವಿ ಮಾತ್ರವಲ್ಲದೆ ಬಹಳ ಸುರಕ್ಷಿತ ಎಂದೂ ಸಾಬೀತಾಗಿದೆ, ಏಕೆಂದರೆ ಇದರಿಂದ ಅಸ್ವಸ್ಥತೆ ಉಂಟಾಗುವ ಸಾಧ್ಯತೆಗಳಿಲ್ಲ.

### ಫಲವತ್ತತೆಯ ಕಾರ್ಯವಿಧಾನಗಳ ಯಶಸ್ಸಿನ ಪ್ರಮಾಣ ಎಷ್ಟು?

IUI ಗೆ ಹೋಲಿಸಿದರೆ IVF ಕಾರ್ಯವಿಧಾನಗಳ ಯಶಸ್ಸಿನ ಪ್ರಮಾಣ ಹೆಚ್ಚಾಗಿದೆ ಮತ್ತು ತೀವ್ರವಾದ ಬಂಜೆತನದ ಸಮಸ್ಯೆಗಳಿಂದ ಬಳಲುತ್ತಿರುವ ದಂಪತಿಗಳಿಗೆ ಸಹಾಯಕವಾಗಿದೆ. ವಯಸ್ಸು ಮತ್ತು ಆರೋಗ್ಯದಂತಹ ವಿವಿಧ ಅಂಶಗಳ ಆಧಾರದ ಮೇಲೆ ಫಲವತ್ತತೆ ಸಂಬಂಧಿತ ಚಿಕಿತ್ಸೆಗಳಿಗೆ ಸಕಾರಾತ್ಮಕ ಫಲಿತಾಂಶದ ಸಾಧ್ಯತೆಗಳು ಶೇಕಡ 35 ರಿಂದ 60 ರವರೆಗೆ ಇದೆ.

### ಬಂಜೆತನವನ್ನು ಎದುರಿಸಲು ಮದರ್‌ಹುಡ್ ಫರ್ಟಿಲಿಟಿ ಕ್ಲಿನಿಕ್ ನಿಮಗೆ ಹೇಗೆ ಸಹಾಯ ಮಾಡುತ್ತದೆ?

ಮದರ್‌ಹುಡ್ ಫರ್ಟಿಲಿಟಿ ಕ್ಲಿನಿಕ್ ART ಅನುಭವಿ ತಜ್ಞರ ವೈದ್ಯರು ಸಮಗ್ರ ತಂಡವನ್ನು ಒಳಗೊಂಡಿದ್ದು, ಅಮೇರಿಕನ್ ಕಾಲೇಜ್ ಆಫ್ ಎಂಬ್ರಿಯೊಲಜಿ ಪ್ರಮಾಣಿತ ಎಂಬ್ರಿಯಾಲೊಜಿಸ್ಟ್, ಆಂಡ್ರೋಲಾಜಿಸ್ಟ್, ಕ್ಲಿನಿಕಲ್ ಸೈಕಾಲಜಿಸ್ಟ್ ಮತ್ತು ಕ್ಲಿನಿಕಲ್ ಡಯಟಿಶಿಯನ್ನರು ಉತ್ತಮ ತರಬೇತಿ ಪಡೆದಿರುವ ದಾದಿಯರು ಮತ್ತು ನೆರವು ಸಿಬ್ಬಂದಿಗಳ ಬೆಂಬಲವನ್ನು ಒಳಗೊಂಡಿದೆ. ART ನಂತಹ ಅತ್ಯಂತ ಸಂಕೀರ್ಣ ಕಾರ್ಯವಿಧಾನಗಳನ್ನು ನಿರ್ವಹಿಸಲು ಅಳವಡಿಸಲಾಗಿರುವ ಇತ್ತೀಚಿನ ಅತ್ಯಾಧುನಿಕ ತಂತ್ರಜ್ಞಾನದ ಭ್ರೂಣಶಾಸ್ತ್ರದ ಪ್ರಯೋಗಾಲಯಗಳನ್ನು ಮದರ್‌ಹುಡ್ ಫರ್ಟಿಲಿಟಿ ಕ್ಲಿನಿಕ್ ಹೊಂದಿದೆ. ಮದರ್‌ಹುಡ್‌ನಲ್ಲಿ ನಮ್ಮ ತಂಡವು ಸಂಪೂರ್ಣ ವಿಶ್ಲೇಷಣೆಯನ್ನು ಮಾಡುತ್ತದೆ ಹಾಗೂ ನಿಮಗೆ ಉತ್ತಮವಾದ ಚಿಕಿತ್ಸಾ ವಿಧಾನವನ್ನು ನೀಡುತ್ತದೆ. ಬನ್ನಿ, ವಿಜ್ಞಾನ ಜೀವವನ್ನು ಸೃಷ್ಟಿಸುವ ಮದರ್‌ಹುಡ್ ಫರ್ಟಿಲಿಟಿ ಕ್ಲಿನಿಕ್‌ನಲ್ಲಿ ನಮ್ಮ ತಂಡದ ಸೃಷ್ಟಿಕರ್ತರನ್ನು ಭೇಟಿ ಮಾಡಿ.

motherhood FERTILITY

WHERE SCIENCE IS A WAY OF LIFE

**FERTILITY: SARJAPUR ROAD - 73386 60513 | HEBBAL - 080 4666 0066 | INDIRANAGAR - 080 2519 0000**